ಗಾಜನೂರಿನಿಂದ ಶಿವಮೊಗ್ಗ ನಗರಕ್ಕೆ ಕುಡಿಯುವ ನೀರಿನ ಸರಬರಾಜು ಯೋಜನೆ

80 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರಕ್ಕೆ ಕುಡಿಯುವ ನೀರು ಒದಗಿಸಲು ಗಾಜನೂರಿನಿಂದ ಶಿವಮೊಗ್ಗ ನಗರದ ನೀರು ಸರಬರಾಜು ಯೋಜನೆ ಯಾವ ಹಂತದಲ್ಲಿದೆ?

ಆ) ಈ ಯೋಜನೆ ಮಂಜೂರು ಆಗಿದ್ದು ಯಾವಾಗ?

ಇ) ಈ ಯೋಜನೆಗೆ ಎಷ್ಟು ಹಣ ನಿಗದಿಪಡಿಸಲಾಗಿದೆ. ಹಾಗೂ ಈ ಯೋಜನೆ ಎಂದು ಮುಗಿಸಲಾಗುತ್ತಿದೆ ಹಾಗೂ ಎಷ್ಟು ಅಂದಾಜಾಗುತ್ತದೆ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

1) ಸುಮಾರು ಶೇ. 65ರಷ್ಟು ಕಾಮಗಾರಿಯನ್ನು ಮುಗಿಸಲಾಗಿದೆ.

2) ನವೆಂಬರ್ 1990

3) 1994-95ನೇ ಸಾಲಿಗೆ ರೂ. 2.61 ಕೋಟಿಗಳನ್ನು ನಿಗದಿಪಡಿಸಲಾಗಿದೆ. ಈ ಯೋಜನೆಯನ್ನು ಎಲ್ಲಾ ವಿಧದಲ್ಲೂ ಮಾರ್ಚ್ 1996ರ ಅಂತ್ಯಕ್ಕೆ ಪೂರ್ಣಗೊಳಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು. ರೂ. 12.00 ಕೋಟಿಗಳು ಎಂದು ಅಂದಾಜು ಮಾಡಲಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಕುಡಿಯುವ ನೀರಿನ ಯೋಜನೆ ಪ್ರಾರಂಭವಾಗಿದ್ದುದು 1990ನೇ ಇಸವಿಯಲ್ಲಿ, 1993ನೇ ಇಸವಿಯಲ್ಲಿ ಅದು ಮುಗಿಯಬೇಕಾಗಿತ್ತು. ಆದರೆ ಇದುವರೆಗೂ ಮುಗಿದಿಲ್ಲ. 5 ಕೋಟಿ ರೂಪಾಯಿಗಳ ಯೋಜನೆ ಪ್ರಾರಂಭವಾದಾಗ ಇದ್ದದ್ದು, ಇವತ್ತು ಹೇಳುತ್ತಾರೆ 12ಕೋಟಿ ರೂಪಾಯಿಗಳು ಬೇಕು ಎಂದು. 20 ಸಾವಿರ ಜನಸಂಖ್ಯೆ ಇದ್ದಾಗ ಎಷ್ಟು ನೀರು ಇತ್ತೋ ಇವತ್ತೂ ಕೂಡ 2 ಲಕ್ಷ ಪಾಪ್ಯುಲೇಷನ್ ದಾಟಿದರೂ ಕೂಡ ಇವತ್ತಿಗೂ ಅಷ್ಟೇ ನೀರು ಇದೆ. ಇಂತಹ ಸಂದರ್ಭದಲ್ಲಿ ಈ ಒಂದು ಯೋಜನೆ ಏನು ಇದೆ ಇದನ್ನು 5ಕೋಟಿ ರೂಪಾಯಿಗಳಿಗೆ ಸರ್ಕಾರ ಮಂಜೂರಾತಿ ನೀಡಿದೆಯೇ? ಈ ಯೋಜನೆಯನ್ನು ತಾವು 1993ನೇ ಇಸವಿಯಲ್ಲಿ ಮುಗಿಸಬೇಕಾಗಿತ್ತು, 1996ನೇ ಇಸವಿಯಲ್ಲಿ ಮುಗಿಸುತ್ತೇವೆಂದು ಹೇಳುತ್ತಿದ್ದೀರಿ ಮಂಜೂರಾತಿ ಆದ ನಂತರ 1996ರ ಒಳಗೆ ಮುಗಿಸುತ್ತೀರಾ? ನಾನು ಮೊದಲೇ ಹೇಳಿದ 20 ಸಾವಿರ ಜನಸಂಖ್ಯೆ ಇರಬೇಕಾದರೆ ಎಷ್ಟು ನೀರು ಇತ್ತೋ ಇವತ್ತು ಎರಡು ಲಕ್ಷ ಪಾಪ್ಯುಲೇಷನ್ ಆದರೂ ಕೂಡ ಅಷ್ಟೇ ನೀರು ಇರುವುದರಿಂದ ಒಂದು ತೊಟ್ಟು ಕುಡಿಯಲು ನೀರು ಸಿಗುತ್ತಿಲ್ಲ. ಮಾನ್ಯ ಅಧ್ಯಕ್ಷರೇ ಶಿವಮೊಗ್ಗ ನಗರಸಭೆಯನ್ನು ರದ್ದು ಮಾಡಿದ್ದಾರೆ. ಈ ಸಂದರ್ಭದಲ್ಲಿ ನಗರಸಭೆಯ ಸದಸ್ಯರು ಇಲ್ಲದೇ ಇರುವ ಕಾರಣ ನಾನು ಒಬ್ಬ ಎಂ.ಎಲ್. ಎ. ಇರುವುದರಿಂದ ಜನ ನನ್ನನ್ನು ಪ್ರಾಣ ಹಿಂಡುತ್ತಿದ್ದಾರೆ. ನಾನು ಶಿವಮೊಗ್ಗ ನಗರಕ್ಕೆ ಹೋಗುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ಅಲ್ಲ ಒಂದು ನೂರು ಬೋರ್‌ವೆಲ್‌ಗಳನ್ನಾದರೂ ತೆಗೆಯುತ್ತೀರಾ?

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಪ್ರತಿಯೊಂದು ಯೋಜನೆಯ ಒರಿಜಿನಲ್ ಎಸ್ಟಿಮೇಟ್ ಒಂದು ಇರುತ್ತದೆ ಅದು ಹೆಚ್ಚಾಗುತ್ತಲೇ ಹೋಗುತ್ತದೆ. ಅದೇ ಪ್ರಕಾರ ಇದೂ ಕೂಡ ಈಗ 12 ಕೋಟಿ ರೂಪಾಯಿಗಳಿಗೆ ಹೋಗಿದೆ. ಈ ಸಂದರ್ಭದಲ್ಲಿ ನಾನು ಈ ಯೋಜನೆಯನ್ನು 1996ನೇ ಇಸವಿ ಮಾರ್ಚಿಯೊಳಗೆ ಪೂರ್ಣ ಗೊಳಿಸಲಾಗುವುದೆಂದು ಹೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ 5 ಕೋಟಿ ರೂಪಾಯಿಗಳಿಂದ 12 ಕೋಟಿ ರೂಪಾಯಿಗಳಿಗೆ ಮಂಜೂರಾತಿ ಆಗಿದೆಯೇ? ಆಗಿಲ್ಲದಿದ್ದರೆ ತಕ್ಷಣ ಮಂಜೂರಾತಿಯನ್ನು ಕೊಡುತ್ತೀರಾ?

ಶ್ರೀ ವೈಜನಾಥ ಪಾಟೀಲ್ : ಮಂಜೂರಾತಿ ನೀಡಲೇಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಮುಖವಾಗಿ ಶಿವಮೊಗ್ಗ ನಗರದ ಕುಡಿಯುವ ನೀರಿನ ಬಗ್ಗೆ ಪ್ರಶ್ನೆ ಕೇಳುತ್ತಿದ್ದಾರೆ. 5 ಕೋಟಿ ರೂಪಾಯಿಗಳಿಂದ 12 ಕೋಟಿ ರೂಪಾಯಿಗಳಿಗೆ ಎಸ್ಟಿಮೇಟ್ ಆಗಿದೆ. ಅವರು ಮುಂದಿನ ವರ್ಷದಲ್ಲಿ ಮುಗಿಸುತ್ತೇವೆಂದು ಹೇಳುತ್ತಿದ್ದಾರೆ. ಅವರು 12 ಕೋಟಿ ರೂಪಾಯಿಗಳಿಗೆ ಆಡಳಿತಾತ್ಮಕ ಮಂಜೂರಾತಿ ಮಂತ್ರಿಗಳು ಸರಿಯಾಗಿ ಉತ್ತರ ಹೇಳದಿದ್ದರೆ ನಾವು ಏನೋ ಪ್ರಶ್ನೆ ಕೇಳಿದಂತೆ ಆಗುತ್ತವೆ ಅವರು 5 ಕೋಟಿ ರೂಪಾಯಿಗಳು ಇದ್ದ ಯೋಜನೆ ಸಹಜವಾಗಿ 12 ಕೋಟಿ ರೂಪಾಯಿಗಳು ಆಗಿದೆ. 12 ಕೋಟಿ ರೂಪಾಯಿಗಳಿಗೆ ಆಡಳಿತಾತ್ಮಕ ಮಂಜೂರಾತಿ ಕೊಡದಿದ್ದರೆ ಕೊಟ್ಟು ಮಾಡಿಸುತ್ತೇವೆಂದು ಹೇಳಿ ಈಗ ತಾತ್ಕಾಲಿಕವಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡಲು ಒಂದು ನೂರು ಬೋರ್‌ವೆಲ್‌ಗಳನ್ನು ಮಾಡಿ ಕೊಡಿ ಎಂದು ಕೇಳುತ್ತಿದ್ದಾರೆ, ಅಷ್ಟು ಬೋರ್‌ವೆಲ್‌ಗಳನ್ನು ತಕ್ಷಣ ನಾವು ತೆಗೆಯುತ್ತೇವೆಂದು ಹೇಳಿದರೆ ಆಯಿತು ಸ್ವಾಮಿ. ಈಗ ಸನ್ಮಾನ್ಯ ಮುಖ್ಯ ಮಂತ್ರಿಗಳು ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ಹಾಗೆ ನಾವು ಟ್ಯಾಂಕರ್‌ಗಳ ಮೂಲಕ ನೀರು ಕೊಡುತ್ತೇವೆಂದು ಹೇಳಿದ್ದಾರೆ. ಹಾಗಾದರೆ ಶಿವಮೊಗ್ಗ ನಗರಕ್ಕೂ ಟ್ಯಾಂಕರ್‌ಗಳ ಮೂಲಕ ನೀರು ಕೊಡುತ್ತೀರಾ ಅಥವಾ ಇಲ್ಲವೇ ಏನು ಮಾಡುತ್ತೀರಿ ಹೇಳಿ ಸ್ವಾಮಿ.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಪೈಪ್‌ಗಳನ್ನು ತಂದು ಎರಡೆರಡು ವರ್ಷಗಳಿಂದ ಶಿವಮೊಗ್ಗ ರಸ್ತೆಯಲ್ಲಿ ಹಾಕಿದ್ದಾರೆ. ತೀರ್ಥಹಳ್ಳಿಯಿಂದ ಶಿವಮೊಗ್ಗಕ್ಕೆ ಬರಲು ರಸ್ತೆ ಇಲ್ಲ. ಆದ್ದರಿಂದ ಈ ಯೋಜನೆಯನ್ನು ಯಾವಾಗಾ ಮುಗಿಸುತ್ತೀರಿ?

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸರ್ಕಾರ ಈ 12 ಕೋಟಿ ರೂಪಾಯಿಗಳ ಅಂದಾಜಿಗೆ ಮಂಜೂರಾತಿ ಕೊಟ್ಟಿಲ್ಲ, ಅಂದರೆ 1996ನೇ ಇಸವಿಯಲ್ಲಿ ಪೂರ್ಣ ಮಾಡುತ್ತೇವೆ ಅಂದರೆ ಮಂಜೂರಾತಿ ಕೊಟ್ಟೆ ಮಾಡಬೇಕಾಗುತ್ತದೆ. ಕುಡಿಯುವ ನೀರಿನ ಸಮಸ್ಯೆಗಳು ಇದ್ದರೆ ಅದರ ಬಗ್ಗೆ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಕೊಳವೇ ಬಾವಿಗಳನ್ನು ಮಾಡಿ ಅಂತ ಹೇಳಿದ್ದೇವೆ. ಈ ಯೋಜನೆ ಸಲುವಾಗಿ 12 ಕೋಟಿ ರೂಪಾಯಿಗಳ ಎಸ್ಟಿಮೇಟ್ ರಿವೈಜ್ ಆಗಿದೆ. ಮಂಜೂರಾತಿ ಕೊಟ್ಟು ಆ ಯೋಜನೆಯನ್ನು ಮಾರ್ಚ್ 1996ನೇ ಇಸವಿ ಒಳಗೆ ಮುಗಿಸುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು : ಆಯಿತಲ್ಲ, ಆ ಯೋಜನೆಗೆ ಮಂಜೂರಾತಿ ಕೊಟ್ಟು ಪೂರ್ಣ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : 5 ಕೋಟಿಯಿಂದ 12 ಕೋಟಿ ಆಗಿದೆ. ಆ 12ಕೋಟಿಗೆ ಮಂಜೂರಾತಿ ಕೊಟ್ಟು ತಾತ್ಕಾಲಿಕವಾಗಿ ಬೋರ್‌ವೆಲ್‌ಗಳನ್ನು ಮಾಡಿಸುತ್ತೇವೆಂದು ಹೇಳುತ್ತಿಲ್ಲ.

ಶ್ರೀ ವೈಜನಾಥ ಪಾಟೀಲ್ : ಕುಡಿಯುವ ನೀರಿನ ಸಮಸ್ಯೆ ಇದ್ದರೆ ಬೋರ್‌ವೆಲ್‌ಗಳ ಮೂಲಕ ಮತ್ತು ಟ್ಯಾಂಕರ್‌ಗಳ ಮೂಲಕ ನಾವು ನೀರು ಸಪ್ಲೈ ಮಾಡುತ್ತೇವೆ. ಕುಡಿಯುವ ನೀರಿನ ಯಾವುದೇ ಸಮಸ್ಯೆ ಬರಗೊಡುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ದಿನವೂ ಶಿವಮೊಗ್ಗದಲ್ಲಿ ಕಾರ್ಪೋರೇಷನ್ ನಿಂದ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಆಫೀಸ್‌ಗೆ ಫೋನ್ ಮಾಡುತ್ತಲೇ ಇದ್ದೇನೆ. ಪತ್ರಗಳನ್ನು ಬರೆಯುತ್ತಲೇ ಇದ್ದೇನೆ. ಒಂದು ನೂರು ಬೋರ್‌ವೆಲ್‌ಗಳನ್ನಾದರೂ ಕೊಡಿ ಎಂದು ಅವರು ನಮ್ಮ ಕೈಯಲ್ಲಿ ಇಲ್ಲ ಅಂತ ಹೇಳುತ್ತಾರೆ. ಇವರು ಎಷ್ಟು ಬೇಕಾದರೂ ಕೊಡುತ್ತೇವೆಂದು ಹೇಳುತ್ತಾರೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮೂರು ದಿವಸದ ಮೊದಲೇ ಎಲ್ಲಾ ಜಿಲ್ಲಾಧಿಕಾರಿಗಳ ಸಭೆಯನ್ನು ಕರೆದು ಡೈರೆಕ್ಷನ್ ಕೊಟ್ಟಿದ್ದೇವೆ. ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡಲು ಆಯಾಯಾ ಜಿಲ್ಲಾ ಅಧಿಕಾರಿಗಳಿಗೆ ವಹಿಸಲಾಗಿದೆ. ಹಣವನ್ನೂ ಕೂಡ ನಾವು ಬೇಕಾದಷ್ಟು ಒದಗಿಸುತ್ತಿದ್ದೇವೆ. ಕುಡಿಯುವ ನೀರಿಗೆ ಯಾವುದೇ ಜಿಲ್ಲೆಯಲ್ಲಿ ಸಮಸ್ಯೆ ಆಗಬಾರದು ಎಂದು.

ಅಧ್ಯಕ್ಷರು : ಅವರು ಈಗ ಸಭೆಯಲ್ಲಿ ಹೇಳಿದ್ದಾರೆ ಎಷ್ಟು ಅಗತ್ಯ ಇದೆ ಅಷ್ಟು ಬೋರ್‌ವೆಲ್‌ಗಳನ್ನು ಹಾಕಿಸಿ ಕೊಡುತ್ತೇವೆ ಮತ್ತು ಈ ರಿವೈಜ್ ಆಗಿರತಕ್ಕಂಥ ಎಸ್ಟಿಮೇಟ್‌ಗೆ ಅನುಮೋದನೆ ಕೊಟ್ಟು ಕೆಲಸ ಮಾಡಿಸುತ್ತೇವೆ ಅಂತ. ಇಲ್ಲಿ ಹಾಗೆ ಹೇಳಿ ಕೆಲಸ ಮಾಡಿಸದೇ ಇರುವುದಕ್ಕೆ ಆಗುವುದಿಲ್ಲ. ಸದನದಲ್ಲಿ ನಿಮಗೆ ಹೇಳಿ ಕೆಲಸ ಮಾಡದೇ ಇರುವುದಕ್ಕೆ ಆಘುವುದಿಲ್ಲ. ಆ ಜವಾಬ್ದಾರಿ ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಭರವಸೆ ಸಮಿತಿಯಿಂದ ತಾವು ಕಡತಗಳನ್ನು ತರಿಸಿ ನೋಡಿದರೆ 15 ವರ್ಷಗಳ ಹಿಂದೆ ಕೊಟ್ಟಿರುವ ಭರವಸೆ ಇನ್ನೂ ಕೂಡಾ ಈಡೇರಿಲ್ಲ ಎಂಬುದು ಗೊತ್ತಾಗುತ್ತದೆ. ತಮ್ಮ ಕಾಲದಲ್ಲಾದರೂ, ಇವತ್ತಿನಿಂದ ಕೊಟ್ಟಿರತಕ್ಕಂಥ ಭರವಸೆಗಳನ್ನು ಈಡೇರಿಸಲಾಗುತ್ತದೆಂದು ತಾವು ಭರವಸೆ ಕೊಟ್ಟರೆ ಸಂತೋಷ. ಭರವಸೆ ಸಮಿತಿಯಲ್ಲಿ ಇರುವ ಕಡತಗಳು ಗುಮಾಸ್ತರು ಕುಳಿತುಕೊಳ್ಳುವ ಜಾಗದಲ್ಲೆಲ್ಲಾ ತುಂಬಿ ಹೋಗಿವೆ.

ಅಧ್ಯಕ್ಷರು : ನನ್ನನ್ನೂ ಅದೇ ಪಟ್ಟಿಗೆ ಹಾಕುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ತಮ್ಮ ಕಾಲದಲ್ಲಾದರೂ ಆ ಭರವಸೆಗಳು ಈಡೇರುವ ಹಾಗೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಇಲ್ಲಿ ಹೇಳಿದ್ದಾರೆ. ಇಲ್ಲಿ ಹೇಳಿ ಕೆಲಸ ಮಾಡದೆ ಇರುವುದಕ್ಕೆ ಬಿಡುವುದಿಲ್ಲ. ಅದರ ಜವಾಬ್ದಾರಿ ನಾನು ತೆಗೆದುಕೊಳ್ಳುತ್ತೇನೆಂದು ನಾನು ಹೇಳಿದ್ದೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮೊನ್ನೆ ಒಂದು ಸರ್ಕುಲೇಷನ್ ಹೊರಡಿಸಿದ್ದಾರೆ. ಇನ್ನು ಮುಂದೆ ಎಲ್ಲಾ ನಗರ ಪಾಲಿಕೆ ಪುರಸಭೆಯಲ್ಲಿರತಕ್ಕವರು ಒಂದು ಸಾವಿರ ಲೀಟರ್ ನೀರಿಗೆ ಒಂದೊಂದು ಮನೆಯವರು 3 ರೂಪಾಯಿಗಳಂತೆ ಕಟ್ಟಬೇಕು ಅಂತ. ಹೀಗೆ ಲೆಕ್ಕ ಹಾಕಿದರೆ ಮಧ್ಯಮ ವರ್ಗದವರು ಒಂದು ತಿಂಗಳಿಗೆ 90 ರೂಪಾಯಿಗಳನ್ನು ಕಟ್ಟಬೇಕಾಗುತ್ತದೆ.

ಅಧ್ಯಕ್ಷರು : ನೀವು ಕೇಳಿರುವುದು ನೀರಿನ ಸಮಸ್ಯೆ. ನೀರಿನ ಬೆಲೆ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮೊದಲನೆಯದು, ಕುಡಿಯುವ ನೀರು ಇಲ್ಲ. ನೀರು ಕೊಟ್ಟ ಮೇಲೆ ಇಷ್ಟು ರೇಟ್ ಹಾಕಿದರೆ ಬಡವರು ನೀರು ಕುಡಿಯುವುದನ್ನೇ ಬಿಟ್ಟು ಬಿಡುತ್ತಾರೆ. ಇವರ ಕಾಲದಲ್ಲಿ ನೀರೂ ಕುಡಿಯದ ಹಾಗಾಗುತ್ತದೆ.

ಅಧ್ಯಕ್ಷರು : ಇವತ್ತು ವಿರೋಧ ಪಕ್ಷದ ನಾಯಕರು ನಗುನಗುತ್ತಾ ಮಾತನಾಡುತ್ತಿರುವುದರಿಂದ ನೀರಿನ ಸಮಸ್ಯೆ ಹಾಗೂ ಎಲ್ಲಾ ಸಮಸ್ಯೆ ಬಗೆಹರಿದು ಹೋಗುತ್ತದೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಎಸ್. ಈಶ್ವರಪ್ಪ : ನೀರು ಕೊಡುವವರೆಗಾದರೂ ಈ ಸುತ್ತೋಲೆಯನ್ನು ವಾಪಸ್ ತೆಗೆದುಕೊಳ್ಳುತ್ತಾರೋ?

ಅಧ್ಯಕ್ಷರು : ಈಶ್ವರಪ್ಪನವರು ಕೇಳುತ್ತಾರೆ, ನೀವು ನೀರಿನ ವ್ಯವಸ್ಥೆ ಮಾಡುವ ವರೆಗೆ ಸರ್ಕಾರದ ಕಡೆಯಿಂದ ಕಳುಹಿಸಿರುವ ಸರ್ಕ್ಯುಲರನ್ನು ತಡೆಹಿಡಿಯುತ್ತೀರಾ ಎಂದು ಕೇಳುತ್ತಾರೆ.

ಶ್ರೀ ವೈಜನಾಥ ಪಾಟೀಲ್ : ತಡೆ ಹಿಡಿಯುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕಾಗುವುದಿಲ್ಲ. ಆದರೆ ಅದರ ಬಗ್ಗೆ ವಿಚಾರ ಮಾಡುತ್ತೇವೆ.

ಗುಲ್ಬರ್ಗಾ ನಗರಕ್ಕೆ ಭೀಮಾ ನೀರು ಸರಬರಾಜು ಯೋಜನೆಗಾಗಿ ಹೈಡ್ರಾಲಿಕ್ ಪರೀಕ್ಷೆ

226 - ಶ್ರೀ ಕಮರುಲ್ ಇಸ್ಲಾಂ (ಗುಲ್ಬರ್ಗ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ನಗರದ ಭೀಮಾ ನೀರು ಸರಬರಾಜು ಯೋಜನೆಯಲ್ಲಿ ಗುತ್ತಿಗೆದಾರರಿಗೆ ನೀರಿನ ಒತ್ತಡ ಪರೀಕ್ಷೆ (ಹೈಡ್ರಾಲಿಕ್ ಟೆಸ್ಟ್) ಮಾಡದೇ ಹಣ ಪಾವತಿ ಮಾಡಿರುವುದು ನಿಜವೇ?*

ಆ) *ಹಾಗಾದಲ್ಲಿ ಇದು ಗುತ್ತಿಗೆದಾರರ ಹಾಗೂ ಮಂಡಲಿಯ ನಡುವಿನ ಒಪ್ಪಂದಕ್ಕೆ ವಿರುದ್ಧವಾಗಿರುತ್ತದೆ.*

ಇ) *ಹೈಡ್ರಾಲಿಕ್ ಟೆಸ್ಟ್ ಮಾಡದೇ ಇರುವುದರಿಂದ ಪ್ರತಿ 15 ದಿನಗಳಿಗೊಮ್ಮೆ ಒಂದೆರಡು ಕೊಳವೆಗಳು ಒಡೆದು ಗುಲ್ಬರ್ಗಾ ನಗರದ ನಾಗರೀಕರಿಗೆ ನೀರು ಸರಬರಾಜಿನಲ್ಲಿ ತೊಂದರೆಯಾಗುತ್ತಿರುವುದು ನಿಜವೇ?*

ಈ) *ಹೈಡ್ರಾಲಿಕ್ ಟೆಸ್ಟ್ ಮಾಡದೇ ಇರುವುದಕ್ಕಾಗಿ ಸಂಬಂಧಿಸಿದ ನೌಕರರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?*

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಕೊಳವೆ ಮಾರ್ಗಗಳನ್ನು ಅಳವಡಿಸಿದ ನಂತರ ಹೈಡ್ರಾಲಿಕ್ ಟೆಸ್ಟನ್ನು ಮಾಡಿಲ್ಲದಿರುವುದು ಸತ್ಯವಾಗಿರುತ್ತದೆ. ಆದ್ದರಿಂದ, ಹೈಡ್ರಾಲಿಕ್ ಟೆಸ್ಟ್‌ನ ನಂತರ ಪಾವತಿಸಬೇಕಾಗಿದ್ದ ಈ ಕಾಮಗಾರಿ ವೆಚ್ಚಗ ಶೇಕಡ 5ರಷ್ಟನ್ನು ತಡೆಹಿಡಿಯಲಾಗಿದೆ.

ಆ) ಇಲ್ಲ

ಇ) ಕಳೆದ 10 ತಿಂಗಳಲ್ಲಿ ನಾಲ್ಕು ಕೊಳವೆಗಳು ಒಡೆದಿದ್ದು ಅವುಗಳನ್ನು ತಕ್ಷಣ ಬದಲಾಯಿಸಲಾಗಿದೆ.

ಈ) ಕಾಮಗಾರಿಯ ವೆಚ್ಚದ ಶೇಕಡ 5ರಷ್ಟನ್ನು ತಡೆ ಹಿಡಿಯಲಾಗಿದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಯ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬಹುದೇ ಎನ್ನುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತದೆ.

SRI QAMARUL ISLAM : Sir, here the Hon'ble Minister has given a wrong reply to the question and I have got the documents relating to this answer. Sir I have put a very specific question, whether the hydraulic test.....